Regd NoM 1299 34 ನೇ ವರ್ಷ ತಾ॥ 24—10—50

" SATYAVADI "

ಕಾರ್ಯಪಕರು ಆರಮನೆ ಸಿರಸ್ತೆದಾರ್ ಎ. ಏ. ಸುಬ್ರಾಯುರು { ಬಿಡಿ ಪ್ರತಿ 3 ಪೈ

ಅಪೇರಾ— ಕೀರ್ತಿಯುತ 5 ನೇ ವಾರ

ದಿಗಂಬರ ನಾಮಿಯಾರ್

ನಂಬಿಯಾರ್, ದ್ರೌಪದಿ, ಕುಮಾರಿ ಕಮಲ, ಬಾಲಸೆಬ್ರಹ್ಮಣ್ಯಂ, ಲಲಿತ, ಪದ್ಮಿನಿ ಅಭಿನಯಿಸಿರುವ ಮಹೋನ್ನತ ತಮಿಳು ಚಿತ್ರ

ಪ್ರತಿ ದಿವಸ 3 ಆಟಗಳು

ಉಡ್‌ಲ್ಯಾಂಡ್ಸ್ 20—10—50 ರಿಂದ

ಶ್ರೀ ಗಣೇಶ ಮಹಿಮೆ

ವಿಜಯಾಕುಮಾರಿ, ವೆಂಕಿಸಾಲ್, ವಿಮಲ, ಅಮರನಾಥ್ ಅಭಿನಯಿಸಿರುವ

ಸಕಲರೂ ನೋಡಬೇಕಾದ ಅತ್ಯಮೋಘ ಪೌರಾಣಿಕ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 2

—10—50 ರಿಂದ ಸ್ಪೈ ಫ್ಯಾಕ್ಟರ್ (ಇಂಗ್ಲಿಷ್)

ರಣಜಿತ್ 20-10-50 ರಿಂದ

ಬಹು ಕಾಲದಿಂದ ನಿರೀಕ್ಷಿಸಲ್ಪಟ್ಟ, ಅತ್ಯಂತ ಮನೋರಂಜನ ಚಿತ್ರ

Hanste Ansu (ಹಿಂದಿ) ಹಸ್ತೆ ಆನು

[ತಾರಾಗಣ] ಮಧುಬಾಲ — ಮನೋರಮ — ಮೋತಿಲಾಲ್ — ಗೋಪ್

ವಯಸ್ಕರಿಗೆ ಮಾತ್ರ .... ಪ್ರತಿ ದಿನ 3 ಪ್ರದರ್ಶನಗಳು

21-10-50 ರಿಂದ ಅಮೋಘ 2 ನೇ ವಾರ

ಮೈಸೂರು ಪ್ರಭುದೇವ್ ಚಿತ್ರ ಮಂದಿರದಲ್ಲಿ

ಎಸ್. ಬಿ. ಪ್ರೊಡಕ್ಷನ್ಸ್‌ರವರ ಪೌರಾಣಿಕ ತೆಲುಗು ಚಿತ್ರ

ಮಾಯಾರಂಭ

ಪಾತ್ರ : ಅಂಜಲಿದೇವಿ, ಜಿ. ವರಲಕ್ಷ್ಮಿ, ಶ್ರೀರಂಜಿನಿ

ಸಾಧಾನಿ, ರಘುರಾಮಯ್ಯ, ಸಿ. ಎಸ್. ಆರ್. ರಾಮರಾವ್

ಶಿವರಾವ್ — ಪ್ರತಿದಿನ 3 ಆಟಗಳು

ಬೆಂಗಳೂರು ವಿಜಯ & ಸಿಟಿಯಲ್ಲಿ 20—10—50 ರಿಂದ 2 ನೇ ವಾರ

— A Rajshri Pictures Release

ರತ್ನ ಖಚಿತ ಶರೀರ

ನ್ಯೂಯಾರ್ಕ್ — ಅಮೇರಿಕೆಯ ಅತ್ಯಂತ ಸುಂದರ ಸ್ತ್ರೀಯರಿಗೆ ಪ್ರತ್ಯಕ್ಷವಾಗಿ ತನ್ನ ಶರೀರದ ಮೇಲೆ ರತ್ನ ದಾಭರಣಗಳನ್ನು ಕೂಡಿಸಿಕೊಳ್ಳುವುದು ಇತ್ತೀಚಿಗೆ ಸ್ತ್ರೀಯುವಾಗತೊಡಗಿದೆ. ನಿರವಾಯವಾದ ಒಂದು ರಾಸಾಯನಿಕ ದ್ರವ್ಯದಿಂದ ದೊಡ್ಡ ರತ್ನದ ಹರಳುಗಳನ್ನೂ ಚರ್ಮದ ಮೇಲೆ ಧರಿಸಿ ನಿರಾಯಾಸವಾಗಿ ತಿರುಗಾಡಬಹುದಾಗಿದೆ. ಅವು ಕಳಚಿಬೀಳುವ ಭಯವೂ ಇರುವುದಿಲ್ಲ.

ಂ ಂ

ಪೌರಸಭೆ

ಮೈಸೂರು ಪೌರಸಭೆಯ ವಿಶೇಷಾಧಿವೇಶನ ನಾಳೆ ಮಧ್ಯಾಹ್ನ 4 ಗಂಟೆಗೆ ಸಮಾವೇಶವಾಗುತ್ತದೆ.

ಂ ಂ

ಅಕೆಡೆಮಿಕ್ ಕೌನ್ಸಿಲ್

ಮೈಸೂರು ವಿಶ್ವವಿದ್ಯಾನಿಲಯದ ಅಕ್ಯಾಡೆಮಿಕ್ ಕೌನ್ಸಿಲ್ ಮೈಸೂರಿನಲ್ಲಿ 27 ನೇ ನೆ ತಾ॥ ಮಧ್ಯಾಹ್ನ 12 ಗಂಟೆಗೆ ಸಮಾವೇಶವಾಗುವುದು.

ಂ ಂ

ರಜತೋತ್ಸವ

ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ದೇಶದಲ್ಲಿ 25 ವರ್ಷದ ಸೇವೆಯನ್ನು ಯಶಸ್ವಿಯಾಗಿ ಸಲ್ಲಿಸಿದೆ. ಆದೇ ಸಂದರ್ಭದಲ್ಲಿ ಮೈಸೂರಿನ ಶಾಖೆಯಲ್ಲಿ ಮೊನ್ನೆ ಮೊನ್ನೆ ಸಮಾರಂಭ ನಡೆಯಿತು. ಬ್ಯಾಂಕ್ ಇನ್ನೂ ಅಭಿವೃದ್ಧಿಯಾಗಲಿ.

ಂ ಂ

ವ್ಯಾಪಾರಸ್ಥರು ಮತ್ತು ಕೈಗಾರಿಕೆ ಉದ್ಯಮಿಗಳು ಶೇಕಡ 90 ಕಾದಾಯ ತೆತ್ತು ದೇಶಪ್ರೇಮವನ್ನು ವ್ಯಕ್ತಪಡಿಸಬೇಕೆಂದು ಶ್ರೀ ರಾಜಾಜಿ ಬೆಂಗಳೂರು ನಗರದಲ್ಲಿ ತಿಳಿಸಿದರು.

ಂ ಂ

ಭಾರತ ಸಚಿವರಾದ ಶ್ರೀ ರಾಜಾಜಿಗಳು ನಿನ್ನೆ ಬೆಂಗಳೂರು ಪುರಭವನದಲ್ಲಿ ಗಾಂಧಿ ಭಾವಚಿತ್ರವನ್ನು ಅನಾವರಣ ಮಾಡುತ್ತಾ ಗಾಂಧಿ ತತ್ವಾನುಸರಣೆ ಅತಿ ಮುಖ್ಯವೆಂದರು.

ಂ ಂ

ನಾಗಪುರ — ಮೊನ್ನೆ ವಿಜಯದಶಮಿ ದಿವಸಕ್ಕೆ ಆರ್. ಎಸ್. ಎಸ್ ಗೆ ಇಪ್ಪತ್ತೈದು ವರ್ಷಗಳು ತುಂಬಿತೆಂದೂ, ಸಂಘವು ಪ್ರೇಮ ಮತ್ತು ಕಾರ್ಯಕ್ಷಮತೆಗಿದೆಯೆಂದೂ, ದ್ವೇಷ ಮತ್ತು ಪ್ರತೀಕಾರಕ್ಕಲ್ಲವೆಂದೂ, ಗುರೂಜಿ ಗೋಲ್ವಾಲ್ಕರ್ ಇಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

ಕೊರಿಯಾದಲ್ಲಿ ಗುರಿಲ್ಲಾಗಳ ಕಾಟ !

ಕೊರಿಯಾ ಯುದ್ಧದಲ್ಲಿ ವಿಶ್ವ ಸಂಸ್ಥೆ ಪಡೆಗಳ ಮೇಲೆ 7 ಸಾವಿರ ಉತ್ತರ ಕೊರಿಯಾದ ಗುರಿಲ್ಲಾಗಳ ಕಾಟ ತೀವ್ರ ಪ್ರಾರಂಭವಾಗಿದೆ.

ಅಮೇರಿಕಾ ಗೂಢಚಾರರ ಬಂಧನ

ಲಂಡನ್— ಜೈಗೆಯಲ್ಲಿ 20 ಅಮೇರಿಕಾ ಗೂಢಚಾರರು ಕಮ್ಯುನಿಸ್ಟ್ ಜೈನಾದವರಿಂದ ದಸ್ತಗಿರಿಯಾಗಿದ್ದಾರೆ.

ಂ ಂ

ಮೈಸೂರು— ನಿನ್ನೆ ಸಂಜೆ ನಡೆದ ಪತ್ರಿಕೋದ್ಯೋಗಿಗಳ ಸಮ್ಮೇಳನದ ಸ್ವಾಗತ ಸಮಿತಿ ಎಂಪಿಂಗಿನಲ್ಲಿ, ಸಮ್ಮೇಳನದ ಕಾರ್ಯಕ್ರಮ, ಆಹ್ವಾನ ಮುಂತಾದ ವಿಷಯಗಳು ಪರಿತೀಲಿಸಲಾಯ್ತು.

ಂ ಂ

ಸಿಂಗಪುರ — ಫ್ರಾನ್ಸ್ ಇಂಡೋ ಣಾದಲ್ಲಿ ತೀವ್ರ ಸೋಲನ್ನನುಭವಿಸುತ್ತಿದೆ

ಂ ಂ

ಮಾರಟಕಾರ್ಲೊ — ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಸಭೆಯಲ್ಲಿ ಅಣುಬಾಂಬನ್ನು ನಿಷೇಧಿಸಿ ನಿರ್ಣಯವಾಯಿತು.

ಂ ಂ

ಬಾಗ್ದಾದಿನಲ್ಲಿ ಫೋರ್ಜರುಗಳಿಗೆಲ್ಲ ಫೋಟೋ ಹೆಸರು ವಿಳಾಸಗಳನ್ನೊಳಗೊಂಡ ಗುರುತಿನ ಕಾರ್ಡುಗಳನ್ನು ಕೊಡಲಾಗಿದೆ ಆವರಿಂದ ಕಳ್ಳತನ ತಪ್ಪಿಸಲು ಹೀಗೆ ಮಾಡಿರುವುದಾಗಿ ಪೋಲೀಸ್ ಡೈರೆಕ್ಟರರ ಹೇಳಿಕೆ.

ಂ ಂ

ನವದೆಹಲಿ — ಭಾರತವು ಐದುಲಕ್ಷ ಟನ್ನು ಗೋಧಿಯನ್ನು ಅಮೇರಿಕಾದಿಂದ ಕೊಳ್ಳಲಿದೆ.

ಂ ಂ

ನ್ಯೂಯಾರ್ಕ್ — ಮುಂದಿನ ಯುದ್ಧವು ಸಂಯುಕ್ತ ಅಮೇರಿಕಾದಲ್ಲೆ ಕಾದಾಡಲ್ಪಡುವುದೆಂದು ಅಮೇರಿಕಾ ವಾಣಿಜ್ಯ ಕಾರ್ಯದರ್ಶಿ ಚಾರ್ಲಸ್ ಸಾಯರ್ ಹೇಳಿರುವರು.

ಂ ಂ

ನವದೆಹಲಿ — ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಸೇರಿದ ಕಲ್ಕತ್ತಾ ಕಾಲೇಜಿನಲ್ಲಿ ಪುರುಷ ಸ್ತ್ರೀ ಭೇದ ಮತ್ತು ಧರ್ಮ ಸಂಬಂಧದ ವಿದ್ಯಾಭ್ಯಾಸವನ್ನು ಕಲಿಸಲು ಪ್ರಾರಂಭಿಸಲಾಗುವುದೆಂದೂ ಈ ವಿಚಾರ ಬೋಧಿಸಲು ಕಲ್ಕತ್ತಾ ವಿಶ್ವವಿದ್ಯಾನಿಲಯವನ್ನೊಪ್ಪಿಸಲು ತಮಗೆ ೫ ವರ್ಷ ಹಿಡಿಯಿತೆಂದೂ ಸಾಂಘಿಕ ಆರೋಗ್ಯ ಶಾಸ್ತ್ರದ ಡೈರೆಕ್ಟರ್ ಡಾಕ್ಟರ್ ಫೂಸೀ ತಿಳಿಸಿರುವರು.

ಸಂಪುಟ ೯ ಸಂಚಿಕೆ ೬ ॥ ಶ್ರೀ ॥ ತಾ॥ 23-10-1950

— ಪ್ರ ಬೋ ಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಭೂಮಿಯು ಚಪ್ಪಟೆಯಾಗಿದೆಯೆ ?

('ಸನ್ಮಾರ್ಗ' ದಿಂದ)

(ಮುಂದುವರಿದುದು)

ನಾವು ಉತ್ತರ ಧ್ರುವದ ಕಡೆಗೆ ಮುಂದುವರಿಯುತ್ತಾ ಹೋದಹಾಗೆ ಭೂಮಿಯು ಆಕರ್ಷಣ ಶಕ್ತಿಯು ಹೆಚ್ಚಿಗೆ ವ್ಯದ್ದಿಯಾಗುತ್ತಾ ಹೋಗುವುದು. ಉತ್ತರೀ ಧ್ರುವದೆ ಅನ್ವೇಶಕರು ಹೇಳಿಕೆಯೇನೆಂದರೆ— ಅಲ್ಲಿ ಅವರು ಕಷ್ಟದಿಂದ ೬೦ ಪೌಂಡಿನ ಭಾರವನ್ನು ಎತ್ತಬಲ್ಲವರಾಗಿದ್ದರು, ಆದರೆ ದಕ್ಷಿಣೀ ಧ್ರುವದ ಅನ್ವೇಷಕರು ಇದಕ್ಕೆ ವಿಪರೀತವಾಗಿ, ಅಲ್ಲಿ ತಾವು ೩೦೦ ಪೌಂಡಿನಿಂದ ೪೦೦ ಪೌಂಡಿನವರೆಗಿನ ಭಾರವನ್ನು ಸುಲಭವಾಗಿ ಎತ್ತಿರುವೆನೆಂದು ಹೇಳುತ್ತಾರೆ. ಭೂಮಿಯು ಗುಂಡಾಗಿರುತ್ತಿದ್ದರೆ ದಕ್ಷಿಣ ಧ್ರುವವು ಉತ್ತರ ಧ್ರುವದಂತೆಯೇ ಸ್ಪಲವಾಗಿರುತ್ತಿದ್ದಿತು.

ನಮ್ಮ ಭೂಮಿಯನ್ನು ಬಹಳ ದೊಡ್ಡ ಚುಂಬಕವೆಂದು ಗಣಿಸಲಾಗಿದೆ, ಹಾಗೂ ಇದರ ಚುಂಬಕ ಶಕ್ತಿಯಿಂದಲೇ ಪ್ರಭಾವಿತವಾಗಿ ಚುಂಬಕದ ಸೂಜಿಯು ಉತ್ತರ ಧ್ರುವದ ಕಡೆಗೆ ಆಕರ್ಷಿತವಾಗಿರುತ್ತದೆ. ಇಂತಹ ಸ್ಥಿತಿಯಲ್ಲಿ ಹಿಂದು ವೇಳೆ ಭೂಮಿಯು ದುಂಡಗಿರುತ್ತಿದ್ದರೆ ಭೂಮಧ್ಯರೇಖೆಯು ದಕ್ಷಿಣಕ್ಕೆ ಹೋದಾಗ ಚುಂಬಕದ ಸೂಜಿಯು ದಕ್ಷಿಣಧ್ರುವದ ಕಡೆಗೆ ತಿರುಗಿಬಿಡಬೇಕು ; ಆದರೆ ಹಾಗಾಗುವುದಿಲ್ಲ. ಇದರಿಂದ ಭೂಮಿಯು ಅವಶ್ಯವಾಗಿ ಚಪ್ಪಟೆಯಾಗಿದೆಯೆಂದು ಸಿದ್ಧವಾಗುತ್ತದೆ : ಏಕೆಂದರೆ ಚುಂಬಕದ ಸೂಜಿಯು ಎಲ್ಲಿಯೇ ಇದ್ದರೂ, ಮಧ್ಯಭಾಗವನ್ನು ನಿರ್ದೇಶಿಸುತ್ತಲೇ ಇರುತ್ತದೆ. ಒಟ್ಟಿಗೇ, ಭೂಮಿಯು ಗೋಳದ ಅತಿ ದೊಡ್ಡ ಪರಿಧಿಯು ಭೂಮಧ್ಯರೇಖೆಯು ಕೆಳಗಿದೆಯೆಂದೂ, ಅತಿ ಚಿಕ್ಕದು ಉತ್ತರ ಧ್ರುವದಲ್ಲಿದೆಯೆಂದೂ ಹೇಳಿಬಿಡುವುದು ಉಚಿತವಾದೀತು.

ಭೂಮಿಯನ್ನು ದುಂಡಗಣಿಸಿ, ಅದರ ಪರಿಧಿಯನ್ನು ೨೪೯೦೦ ಮೈಲುಗಳೆಂದು ಮನ್ನಿಸಿದಲ್ಲಿ ೨೪ ತಾಸಿನ ಲೆಕ್ಕದಿಂದ ಅದು ತನ್ನ ಅಚ್ಚಿನಲ್ಲಿ ಒಂದು ತಾಸಿಗೆ ೧೦೦೦ ಮೈಲು ತಿರುಗಬೇಕು ; ಆದರೆ ಈ ವೇಗವು ಎಷ್ಟು ಸ್ಪಲವಾಗಿದೆಯೆಂದರೆ ಧಾತಾಳದ ಪ್ರತಿಯೊಂದು ಪಸ್ಪೂ ಚಿಂದಿಚಿಂದಿಯಾಗಿ ಚದರಿಹೋದೀತು. ಒಂದುವೇಳೆ ಭೂಮಿಯು ಆಕರ್ಷಣಶಕ್ತಿಯು ಹಾಗಾಗಗೊಡುವುದಿಲ್ಲವೆಂದು ಹೇಳುವುದಾದರೆ, ಸ್ಯೂಯಾರ್ಕಿನಿಂದ ಚಿಕಾಗೋವರೆಗೆ (೧೦೦೦ ಮೈಲು), ಯಾವ ಮನುಷ್ಯನೂ ಬೈಲೂನಿನಲ್ಲಿ ತಾಸಿಸೊಳಗೆ ಯಾತ್ರೆ ಹೊಯ್ಯಬಲ್ಲನು. ಇದೇ ರೀತಿ ೨-೩ ತಾಸಿನಲ್ಲಿ ಚಿಕಾಗೋದಿಂದ ಸ್ಯಾನ್ ಫ್ರಾನ್ಸಿಸ್ಕೋವರೆಗೆ ಯಾತ್ರೆಮಾಡಬಲ್ಲನು ; ಆದರೆ ಇದು ಅತ್ಯಂತ ಅಸಂಭವ.

ಈಗ ಉದಾಹರಣೆಗೆ 'ಮಿಕ್' ಎಂಬ ಕಾಲುವೆಯನ್ನೇ ಎತ್ತಿಕೊಳ್ಳೋಣ. ಈ ಕಾಲುವೆಯು 'ಲೋಕ್ ಹೋಸ್ಟ್' ನಿಂದ "ರೋಚೆಸ್ಟರ್" ವರೆಗೆ ೬೦ ಮೈಲು ಉದ್ದವಿದೆ. "ಭೂಮಿಯು ದುಂಡಗಿದೆ" ಯೆಂಬ ಸಿದ್ಧಾಂತವನ್ನನುಸರಿಸಿ ಈ ಕಾಲುವೆಯ ಉದ್ದಗಲದ ವೃತ್ತವು ೬೦ ಡಿಗ್ರಿಯಾಗಬೇಕು, ಹಾಗೂ ತುದಿಗಳಿಗಿಂತ ಮಧ್ಯದ ಏರು ೨೫೬ ಅಡಿ ಆಗಬೇಕು. ಆದರೆ ಸ್ಟೇಟ್ ಇಂಜಿನಿಯರರ ರಿಪೋರ್ಟನ್ನನುಸರಿಸಿ ಈ ಎತ್ತರವು ಮೂರು ಅಡಿಗಿಂತಲೂ ಕಮ್ಮಿಯಿದೆ.

ಭೂಮಿಯು ದುಂಡಾಗಿದ್ದರೆ, ಅದರ ಸ್ವಾಭಾವಿಕ ದಂಡಿನಲ್ಲಿ ಎಂಬುಗಳಿಗಿಂತ ಸಡುವಿನ ಭಾಗವು ೧೬೬೬ ಅಡಿ ಎತ್ತರವಾಗಿರಬೇಕು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಂಪು ಕಡಲಿಗೂ ಭೂವಧ್ಯ ಸ್ಥಾನಕ್ಕೂ ತಲೆನೂಡಿದಲ್ಲಿ ಭೂಮಧ್ಯ ಸ್ಥಾನವು ಕೆಂಪುಗಡಲಿನಿಂದ ಕೇವಲ ಆರು ಇಂಚು ಎತ್ತರವಾದೀತು. ಪಾಠಶಾಲೆಗಳಲ್ಲಿ ಭೂಮಿಯು ಗುಂಡಾಗಿರುವುದಕ್ಕೆ ಅತ್ಯಂತ ಲೆಕ್ಕಪ್ರಿಯವಾದ, ಸವುದ್ರದಲ್ಲಿ ದೂಕ್ಕೆ ಹೋಗುತ್ತಿರುವ ಹಡಗಿನ ಉದಾಹರಣೆಯನ್ನು ಕೊಡಲಾಗುತ್ತದೆ. ಈ ಉದಾಹರಣೆಯಲ್ಲಿ ಹಡಗು ಕ್ಷಿತಿಜದ ಆಚೆಗಡೆ ಅಡಗುತ್ತಾ ಹೋಗುವುದರಿಂದಲೂ ಕೇವಲ ಕೂವೆ ಮರವು ತೋರುವುದರಿಂದಲೂ ಭೂಮಿಯು ದುಂಡಾಕಾರವನ್ನು ಪ್ರಮಾಣಕ್ಕಿಡುತ್ತಾರೆ ಆದರೆ ಇದು 'ಪರ್ಸ್‌ಪೆಕ್ಟಿವ್' ಎಂಬ ದೃಷ್ಟಿಭ್ರಮವು. ಹೈಲಿನ ಹಲಗೆಗಳು ಪುಂಡೆ ಸೇರಿಕೊಂಡಿರುವುದನ್ನು ನೋಡಿ, ಅವು ಅದೇ ಸ್ಥಿತಿಯಲ್ಲಿ ಸ್ಥಾಪಿಸಲ್ಪಟ್ಟನೆಯೆಂದು ಯಾರಾದರೂ ಅನುಮಾನಿಸಿಯಾರೇನು ? ಶಕ್ತಿಶಾಲಿಯಾದ ದೂರವೀಕ್ಷಣಯಂತ್ರದಿಂದ ನೋಡಿದುದಾದರೆ ನಿಶ್ಚಯವಾಗಿಯೂ ಪೂರ್ಣ ಹಡಗೂ ಕಾಣಿಸುವುದು. ಒಂದು ವೇಳೆ ನೀರಿನ ತಳವು ಗುಂಡಾಗಿದ್ದಲ್ಲಿ ಹೀಗೆ ದೃಷ್ಟಿಗತವಾಗುತ್ತಿದ್ದಿತೆ ?

ಭೂಮಿಯು ದುಂಡಾಗಿರುತ್ತಿದ್ದಲ್ಲಿ ಭೂಮಧ್ಯ ರೇಖೆಯು ಅಡಿಯ ಕೆಳಗಿನ ಭಾಗಗಳಲ್ಲಿ ಧ್ರುವ ತಾರೆಯು ಕದಾಪಿ ತೋರುತ್ತಿದ್ದಿಲ್ಲ. ೩೧ ದಕ್ಷಿಣೋತ್ತರ ಕ್ಷಾಂಶದ ನಡೆಗೆ ಧ್ರುವ ನಕ್ಷತ್ರವು ಸುಳವಾಗಿ ನೋಡಲ್ಪಟ್ಟಿದೆ. ಭೂಮಿಯು ಗುಂಡಾಗಿರುತ್ತಿದ್ದರೆ ಅರ್ಕಟಿಕ್ ಮತ್ತು ಎಂಟಾರ್ಕಟಿಕ್ ಸರ್ಕಲ್‌ಗಳಲ್ಲಿ ಸಮಾನವಾಗಿ ೬ ತಿಂಗಳ ಹಗಲೂ ೬ ತಿಂಗಳ ಇರುಳೂ ಇರುತ್ತಿದ್ದಿತು. ಆದರೆ ವಾಷಿಂಗ್ಟನ್ನಿನ 'ಬ್ಯೂರೋ ಆಫ್ ನೆವಿಗೇಶನ್' ದ್ವಾರಾ ಪ್ರಕಾಶಿತವಾದ 'ನೋಟಿಕಲ್-ಎಲ್ ನೋನಕ್' ಎಂಬ ಪಂಚಾಂಗಾನುಸಾರವಾಗಿ ದಕ್ಷಿಣದಲ್ಲಿ ೭೦ ಅಕ್ಷಾಂಶದಲ್ಲಿರುವ ಪೆಟ್ ಲೇಂಡ್ ದ್ವೀಪದಲ್ಲಿ ಅತಿ ದೊಡ್ಡ ಹಗಲು ೧೪ ಗಂಟೆ ೫೩ ನಿಮಿಟ್ಸುದಾಗಿರುತ್ತದೆ ಉತ್ತರದ ಕಡೆ ನಾರ್ವೆಯಲ್ಲಿ ೭೦ ಅ 'ಹೇಮರ್‌ಫಾಸ್ಟ್' ಎಂಬ ಸ್ಥಳದಲ್ಲಿ ಸಂಪೂರ್ಣ ಮೂರು ತಿಂಗಳ ಕ್ಷಾಂಶದಲ್ಲಿ ಗಳ ಅತಿ ದೊಡ್ಡ ಹಗಲಾಗುತ್ತದೆ. ಧ್ರುವಗಳ

ಭೂಮಿಯು ಗೋಚಾವಾಗಿದ್ದರೆ, ಉತ್ತರ ನತ್ತ ದಕ್ಷಿಣದಲ್ಲಿ ಧ್ವನಿ ವಿಷಯಕವಾಗಿ ಯಾವುದೇ ಭಿನ್ನತೆ ಇರುತ್ತಿದ್ದಿಲ್ಲ. ಎಂಟಾರ್ಕಟಿಕ್ ಪ್ರದೇಶದಲ್ಲಿ ಪಿಸ್ತೂಲಿನ ಸಾಮಾನ್ಯ ಸದ್ದು ತೋಪಿನ ಸದ್ದಿನಂತೆ ಮೊಳಗುತ್ತದೆ ಮತ್ತು ಮುಂಜಿನ ಬಂಡೆಯು ಒಡೆಯುವ ಧ್ವನಿಯಾದರೋ ಪ್ರಳಯಾನಂತರ ದಕ್ಕಿಂತಲೂ ಭಯಂಕರವಾಗಿರುತ್ತದೆ.

— ಸಶೇಷ

'ಹಿಂದೂ ಕೋಡು ಮಸೂದೆಯನ್ನು ನಿರೋಧಿಸಿ'

ಸನಾತನೀ ಹಿಂದೂಗಳಿಗೆ ಶ್ರೀ ದ್ವಾರಕಾ ಜಗದ್ಗುರುಗಳ ಕಟ್ಟಾಜ್ಞೆ

(ಸ್ವಂ ಸು ತಂತಿ)

ಪೋರ್‌ಬಂದರ್ ಅ 21— ಶ್ರೀ ದ್ವಾರಕಾ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾಸ್ವಾಮಿಗಳು ಪೋರ್‌ಬಂದರಿನಲ್ಲಿ ಜರುಗಿದ ಭಾರಿ ಸಭೆಯಲ್ಲಿ ಮಾಡಿದ ಸ್ಫೂರ್ತಿದಾಯಕ ಭಾಷಣದಲ್ಲಿ — ಬರುವ ಪಾರ್ಲಿಮೆಂಟಿನಲ್ಲಿ ಬರಲಿರುವ ಹಿಂದೂ ಕೋಡ್ ಮಸೂದಾ ಕಾನೂನನ್ನು ಎಲ್ಲಾ ಸನಾತನೀ ಹಿಂದೂಗಳೂ ನಿರೋಧಿಸಬೇಕು ಎಂದು ನಿಯಮಾವಳಿಸಿದರು ; ಸರ್ಕಾರವು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದರು ; ಈ ಬಗ್ಗೆ ಬಾಬೂ ರಾಜೇಂದ್ರ ಪ್ರಸಾದರನ್ನೂ, ಪಂ || ನೆಹರುರವರನ್ನೂ, ಸರ್ದಾರ್ ಪಟೇಲರನ್ನೂ ಕೋರಿಕೊಂಡರು. ಕ್ಷೀಪ್ರದಲ್ಲಿಯೇ ಶ್ರೀ ಶ್ರೀ ಜಗದ್ಗುರುಗಳು ಮಾಧವಪುರ, ಧೋರಾಜಿ ಮುಂತಾದ ಸ್ಥಳಗಳಿಗೆ ಪ್ರಯಾಣ ಬೆಳೆಸಿದರು.

Edited, Printed and Published by M. S. Krishna Rao at the Satyavadi Press Channapuram Mysore